# ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅದ್ವೈತ: ಡಿ.ವಿ.ಜಿ. ಅವರ ಕೃತಿಗಳು

—ವಿದ್ವಾನ್ ಎನ್. ರಂಗನಾಥ ಶರ್ಮಾ

ಪ್ರತಿಯೊಬ್ಬ ಮಹಾಕವಿಯು ಎಲ್ಲ ಸಾಹಿತ್ಯಪ್ರಕಾರಗಳಲ್ಲಿಯೂ ಆತನು ನಂಬಿರುವ ಜೀವನಾದರ್ಶದ ಧಾರೆ ಅನುಸ್ಯೂತವಾಗಿ ಹರಿದಿರುತ್ತದೆ. ಇದು ಆ ಕವಿಗೆ ಆದರ್ಶವಾದ ಜೀವನಮೌಲ್ಯ. ಅದರ ಪ್ರತಿಪಾದನೆಯೇ ಕಾವ್ಯದ ಮುಖ್ಯೋದ್ದೇಶವಾಗದಿದ್ದರೂ ಆತನ ನಂಬಿಕೆ ಅಲ್ಲಲ್ಲಿ ಅಭಿವ್ಯಕ್ತವಾಗುವುದು ಸಹಜವಾಗಿದೆ. ಕೆಲವೆಡೆ ಅದು ಸ್ಪಷ್ಟವಾಗಿ, ಕೆಲವೆಡೆ ಅಸ್ಪಷ್ಟವಾಗಿ ಅದು ಕಾಣಿಸಿಕೊಳ್ಳಬಹುದು. ವರ್ಣನೀಯ ವಸ್ತುವಿಗೆ ಒಂದು ಹೋಲಿಕೆಯನ್ನು ಕೊಟ್ಟಾಗ, ದೃಷ್ಟಾಂತದಿಂದ ವಿವರಿಸಿದಾಗ, ಅರ್ಥಾಂತರನ್ಯಾಸದಿಂದ ಸಮರ್ಥಿಸಿದಾಗ ಕವಿಯ ಹೃದಯಾಂತರಾಳದಲ್ಲಿರುವ ವಿಶ್ವಾಸ ಎದ್ದುಕಾಣಿಸಿಕೊಳ್ಳುತ್ತದೆ. ಏಕೆಂದರೆ, ಚಿತ್ತವೃತ್ತಿಯ ಸುಂದರವಾದ ಅಭಿವ್ಯಕ್ತಿಯೇ ಕಾವ್ಯ. ಹೀಗೆ ಅಭಿವ್ಯಂಜಿಸುವಾಗ ತನ್ನ ವಿಶ್ವಾಸದ ತಳಹದಿಯನ್ನವಲಂಬಿಸಿದ ಇತರ ಭಾವಗಳೂ ಪ್ರಕಟವಾಗಬಹುದು. ಕವಿಯು ನಂಬಿದ ದಾರ್ಶನಿಕ ತತ್ತ್ವಗಳೂ ಮತಧರ್ಮಗಳಲ್ಲಿರುವ ಕವಿಯ ವಿಶ್ವಾಸವೂ ಕೃತಿಗಳಲ್ಲಿ ಕಾಣಿಸಬಹುದು. ಕಾಳಿದಾಸನ ರಘುವಂಶ, ಕುಮಾರಸಂಭವ ಕಾವ್ಯಗಳಲ್ಲಿ ಏಕೇಶ್ವರವಾದವು ಸ್ಪಷ್ಟವಾಗಿ ಮೈದಳೆಯುತ್ತದೆ. ಬ್ರಹ್ಮ. ವಿಷ್ಣು. ಮಹೇಶ್ವರ–ಈ ತ್ರಿಮೂರ್ತಿಗಳನ್ನು ಸಮಾನ ಸ್ಥಾನದಲ್ಲಿಟ್ಟು ಮೂವರಿಗೂ ಸೃಷ್ಟಿ, ಸ್ಥಿತಿ, ಲಯಕರ್ತೃತ್ವಗಳನ್ನು ವರ್ಣಿಸಿ ಪರಮಾರ್ಥದಲ್ಲಿ ಮೂವರೂ ಒಂದೇ ವ್ಯಕ್ತಿಯೆಂದು ಕಾಳಿದಾಸನು ಸ್ತುತಿಸಿದ್ದಾನೆ. ಬಾಣನ ಕಾದಂಬರಿಯಲ್ಲಿ ವ್ಯಕ್ತಿಗತ ಸೌಜನ್ಯವು ಪ್ರಧಾನವಾಗಿ ಎದ್ದು ಕಾಣುತ್ತದೆ. ಅಲ್ಲಿ ಬರುವ ಪಾತ್ರಗಳಲ್ಲಿ ಪ್ರತಿಯೊಬ್ಬರೂ ಸೌಜನ್ಯದ ಮೂರ್ತಿಗಳು. ಒಬ್ಬರೂ ಒಂದು ಕೆಟ್ಟ ಮಾತನ್ನೂ ಆಡುವುದಿಲ್ಲ. ಪಂಪನ ಕಾವ್ಯಗಳಲ್ಲಿ ಜಿನಾಗಮದ ಪಾರಮ್ಯವೂ ಹರಿಹರ ರಾಘವಾಂಕರಲ್ಲಿ ಶೈವಭಕ್ತಿಯ ಉತ್ಕರ್ಷವೂ ಕಂಡುಬರುತ್ತವೆ. ಇದಿಷ್ಟು ಬರಿಯ ನಿದರ್ಶನ. ಡಾ॥ ಡಿ.ವಿ.ಜಿ.ಯವರ ಕೃತಿಗಳಲ್ಲಿ ಅದ್ವೈತದರ್ಶನವು ಸ್ಫುಟವಾಗಿ ಗೋಚರಿಸುತ್ತದೆ.

ಈ ಪ್ರಬಂಧದಲ್ಲಿ ಡಿ-ವಿ.ಜಿ.ಯವರ ನಾಲ್ಕು ಕೃತಿಗಳನ್ನು ಪರಿಶೀಲನೆಗಾಗಿ ತೆಗೆದುಕೊಂಡಿದೆ. ಶ್ರೀಮದ್ಭಗವದ್ಗೀತಾತಾತ್ಪರ್ಯ ಅಥವಾ ಜೀವನಧರ್ಮಯೋಗ, ಅದ್ವೈತತತ್ತ್ವ ಮತ್ತು ಅನುಷ್ಠಾನ–ಈ ಎರಡು ಗ್ರಂಥಗಳ ಜೊತೆಗೆ ಅವರು ರಚಿಸಿರುವ ಎರಡು ಕಗ್ಗಗಳು—ಇವೇ ಆ ನಾಲ್ಕು ಕೃತಿಗಳು. ಮೊದಲನೆಯದಾದ

ಜೀವನಧರ್ಮಯೋಗವು ವೇದಾಂತದ ಎಲ್ಲ ಜಾಡುಗಳನ್ನೂ ವಿಮರ್ಶಿಸಿ ನಿರೂಪಿಸುವ ಉದ್ಗ್ರಂಥ. ಎರಡನೆಯದು ನೇರವಾಗಿ ಅದ್ವೈತ ತತ್ತ್ವವನ್ನು ನಿರೂಪಿಸಿ ಅದರ ಅನುಷ್ಠಾನವಿಧಾನವನ್ನೂ ಅವಿರೋಧವಾಗಿ ದ್ವೈತ ವಿಶಿಷ್ಟಾದ್ವೈತಗಳೊಡನೆ ಸಮನ್ವಯ ಪ್ರಕಾರವನ್ನೂ ವಿಚಾರ ಮಾಡುತ್ತದೆ. ಉಳಿದ ಎರಡು ಕಗ್ಗಗಳು ಸುಭಾಷಿತ ಕೃತಿಗಳು. ದಾರ್ಶನಿಕ ಮೌಲ್ಯಗಳನ್ನೊಳಗೊಂಡ ಈ ಕೃತಿಗಳನ್ನು ದಾರ್ಶನಿಕ ಕಾವ್ಯಗಳೆಂದೋ ಶಾಸ್ತ್ರಕಾವ್ಯಗಳೆಂದೋ ಹೆಸರಿಸಬಹುದು. ಈ ಕಗ್ಗಗಳಲ್ಲಿ ಅದ್ವೈತ ಭಾವಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಅದ್ವೈತದ ತಳಹದಿಯ ಮೇಲೆ ಸುಭಾಷಿತ ಕಾವ್ಯವು ವಿರಾಜಿಸುತ್ತಿದೆ.

ಡಿ.ವಿ.ಜಿ.ಯವರ ಹೃದಯಕ್ಕೆ ಸಮ್ಮತವಾದದ್ದು ಅದ್ವೈತವಾದರೂ ಅವರು ದ್ವೈತ, ವಿಶಿಷ್ಟಾದ್ವೈತ ದರ್ಶನಗಳನ್ನು ತುಂಬ ಗೌರವದಿಂದ ಕಾಣುತ್ತಾರೆ. ಸಾಧಕರಿಗೆ ಅವೂ ಶ್ರೇಷ್ಠಮಾರ್ಗಗಳೆಂದು ತೋರಿಸಿಕೊಡುತ್ತಾರೆ. ಯಾವ ಮತ ಧರ್ಮಗಳ ವಿಷಯವಾಗಿಯೂ ಒಂದೇ ಒಂದು ನಿಂದನೆಯ ಮಾತನ್ನೂ ಅವರು ಆಡುವುದಿಲ್ಲ. ಎಲ್ಲ ಆಸ್ತಿಕದರ್ಶನಗಳೂ ಮತಗಳೂ ಭಗವಂತನಿಗೆ ಅರ್ಪಿಸಿದ ಮುತ್ತಿನ ಹಾರ. ಒಂದೊಂದು ದರ್ಶನವೂ ಒಂದೊಂದು ಮುತ್ತು. ಎಲ್ಲವೂ ಭಗವಂತನಿಗೆ ಪ್ರಿಯವಾದದ್ದು ಎಂಬುದೇ ಅವರ ನಿಲುವು. ಔಷಧದ ಅಂಗಡಿಯಲ್ಲಿ ನೂರೆಂಟು ಮದ್ದುಗಳಿರುತ್ತವೆ. ರೋಗಕ್ಕೆ ತಕ್ಕ ಮದ್ದು, ರೋಗಿಗೆ ಎಟಕುವ ಮದ್ದು, ಎಲ್ಲವೂ ಬೇಕು. ಯಾವುದೂ ಹೆಚ್ಚಲ್ಲ, ಯಾವುದೂ ಕಡಿಮೆಯಲ್ಲ. ಹೀಗೆ ಡಿವಿಜಿಯವರು ಸಮನ್ವಯದೃಷ್ಟಿಯನ್ನವಲಂಬಿಸಿದ್ದಾರೆ. ಎಲ್ಲ ದರ್ಶನಗಳೂ ಮತಧರ್ಮಗಳೂ ಹೇಗೆ ಶ್ರೇಷ್ಠವಾದವುಗಳು, ಹೇಗೆ ಉಪಯುಕ್ತವಾದವುಗಳು ಎಂಬುದನ್ನು ತೋರಿಸಿಕೊಟ್ಟಿದ್ದಾರೆ.

ಡಿ.ವಿ.ಜಿ.ಯವರ ಎರಡು ಕಗ್ಗಗಳಲ್ಲಿ ಅದ್ವೈತಭಾವಗಳು ಹೇಗೆ ಸ್ಫುರಿತವಾಗಿವೆಯೆಂಬುದನ್ನು ಮುಂದೆ ತೋರಿಸಿಕೊಡಲಾಗುತ್ತದೆ. ಅದಕ್ಕೆ ಮೊದಲು ಜೀವನ ಧರ್ಮಯೋಗ, ಅದ್ವೈತ ತತ್ತ್ವ ಮತ್ತು ಅನುಷ್ಠಾನ—ಎಂಬೆರಡು ಗ್ರಂಥಗಳನ್ನು ಸಮೀಕ್ಷಿಸುವುದು ಉತ್ತಮ. ಡಿ.ವಿ.ಜಿ.ಯವರು ನಂಬಿದ ಅದ್ವೈತದ ಸ್ವರೂಪವೇನು, ವ್ಯಾಪ್ತಿ ಎಷ್ಟು, ಜೀವನದಲ್ಲಿ ಅದನ್ನು ಹೊಂದಿಸಿಕೊಳ್ಳುವ ಬಗೆ ಹೇಗೆ, ಅನ್ಯ ದರ್ಶನಗಳೊಡನೆ ಇದರ ಸಂಬಂಧ ಸಮನ್ವಯಗಳೆಂತು—ಎಂಬುದು ಇವುಗಳ ಸಮೀಕ್ಷೆಯಿಂದ ಗೊತ್ತಾಗುತ್ತದೆ. ವಿಶೇಷವಾಗಿ ಅವರ ಮಾತುಗಳನ್ನೇ ಅಲ್ಲಲ್ಲಿ ಉದ್ಧರಿಸಲಾಗುವುದು.

ಜೀವನಧರ್ಮಯೋಗದಲ್ಲಿ ಗೀತೆಯ ಸಾರಾಂಶವನ್ನು ಹೀಗೆ ಹೇಳಿದ್ದಾರೆ: ಗೀತೋಪದೇಶದ ಸಾರಾಂಶವನ್ನು ಒಂದೇ ಒಂದು ಮಾತಿನಲ್ಲಿ ಹೇಳಬೇಕೆಂದರೆ,

ಆ ಮಾತು ಜೀವಸಂಸ್ಕಾರ. ಜೀವವನ್ನು ಪರಿಶೋಧಿಸುವುದು ಮತ್ತು ಜೀವವನ್ನು ಉತ್ತಮದಶೆಗೆ ತರುವುದು–ಇದನ್ನು ಕಲಿಸುವುದು ಗೀತೆಯ ಮುಖ್ಯೋದ್ದೇಶ. ಜೀವಪ್ರಗತಿ ಎಂದರೂ ಜೀವೋತ್ಕರ್ಷ ಎಂದರೂ ಇದೇ: ಜೀವಕ್ಕೆ ಅನಾದಿಯಾಗಿ ಬಂದು ಮುಸುಕಿರುವ ಮಾಯಾಮೋಹಗಳ ಪೊರೆಯನ್ನು ಕಳಚಿ, ಅದಕ್ಕೆ ಪರಮಾತ್ಮ ದರ್ಶನಾರ್ಹತೆಯನ್ನು ಕೊಡುವುದು. ಇದೇ ಧರ್ಮ" (ಜೀವ, ಪುಟ ೬೦೩). ಜೀವಾತ್ಮನೆಂದರೆ ಯಾರು? ಮನುಷ್ಯನು 'ನಾನು' 'ನಾನು' ಎಂದು ನುಡಿಯುವಾಗ ಯಾವುದನ್ನು ಕುರಿತು ಹಾಗೆ ನುಡಿಯುತ್ತಾನೋ ಅದು ಆತ್ಮ. 'ಅಹಂ' ಪದಕ್ಕೆ ವಿಷಯವಾದದ್ದು ಆತ್ಮ. ಆತ್ಮವೆಂಬುದು ಸ್ವರೂಪ ಸ್ಥಿತಿಯಲ್ಲಿ ಚೈತನ್ಯ; ಚಿಚ್ಛಕ್ತಿ. ಆ ಚೈತನ್ಯವು ದೇಹಾದಿಕರ್ಮಸಾಧನಗಳನ್ನು ಧರಿಸಿಕೊಂಡ ಅವಸ್ಥೆಯಲ್ಲಿ 'ಜೀವ' 'ಜೀವಾತ್ಮ' ಎನಿಸಿಕೊಳ್ಳುತ್ತದೆ....ಆತ್ಮಕ್ಕೆ ಉಪಾಧಿಯೊಂದು ಸೇರಿದಾಗ ಜೀವವಾಗುತ್ತದೆ" (ಜೀವ, ಪುಟ ೨೮೩). ಇದೆಲ್ಲವೂ ಅದ್ವೈತಮತವನ್ನವಲಂಬಿಸಿ ಬರೆದದ್ದೆಂಬುದು ಸ್ಪಷ್ಟವಾಗಿದೆ. ಮುಂದಿನ ಮಾತು ಇದನ್ನು ಇನ್ನೂ ದೃಢಪಡಿಸುತ್ತದೆ. "ಈಶ್ವರನೆಂಬುದು ಪರಬ್ರಹ್ಮಚೈತನ್ಯದ ಕಾರ್ಯರೂಪ. ಯಾವ ಚೈತನ್ಯವು ವ್ಯಷ್ಟಿರೂಪದಲ್ಲಿ–ಬಿಡಿಬಿಡಿಯಾಗಿ–ಜೀವವೆನಿಸಿ ಕೊಂಡು ಆತ್ಮಪ್ರಕಾಶವಾಗಿರುತ್ತದೆಯೋ ಅದೇ ಚೈತನ್ಯವು ಸರ್ವತ್ರ ವ್ಯಾಪಿಸಿ ಸಮಷ್ಟಿರೂಪದಲ್ಲಿ ಪರಮಾತ್ಮನೆನಿಸುತ್ತದೆ. ಅದೇ ಪರಮಾತ್ಮವಸ್ತುವೇ ಜಗಲ್ಲೀಲಾ ರೂಪದಲ್ಲಿ ಈಶ್ವರನೆನಿಸುತ್ತದೆ. ಜಗದತೀತದಶೆಯಲ್ಲಿ ಅದೇ ಪರಬ್ರಹ್ಮವೆನಿಸು ತ್ತದೆ (ಜೀವ, ಪುಟ ೬೦೬)

ಮೋಕ್ಷಸುಖವನ್ನು ಕುರಿತು ಡಿ.ವಿ.ಜಿ.ಯವರು ಹೇಳಿರುವುದು ಅದ್ವೈತಾನು ಸಾರಿಯಾದದ್ದು. ಅದನ್ನು ವಿಚಾರಮಾಡುತ್ತ ಹೀಗೆ ನುಡಿದಿದ್ದಾರೆ: "ಅಹಂತೆ ಯಿಂದ ಬಿಡುಗಡೆಯೇ ಮೋಕ್ಷ–ಎಂದು ಹೇಳುವುದು ಎಲ್ಲ ದೃಷ್ಟಿಗಳಿಂದಲೂ ಉಚಿತವಾದೀತು....ಎಲ್ಲ ಅನುಭವಗಳೂ ಮೇಲುಮೇಲಿನವು, ತನ್ನಿಂದ ಬೇರೆಯಾದ ಪ್ರಕೃತಿಯ ಚೇಷ್ಟಿತಗಳು; ವಾಸ್ತವವಾಗಿ ಇರುವ ವಸ್ತು ಪರಮಾತ್ಮ ಒಂದೇ, ತಾನು ಸದಾ ಅದರಲ್ಲಿ ಇರತಕ್ಕವನೇ–ಎಂದು ಕ್ಷಣೇಕ್ಷಣೇ ಅನುಭವವಾಗುತ್ತಿದ್ದರೆ ಅವನ ಪಾಲಿಗೆ ಬಂಧವೂ ಇಲ್ಲ, ಮೋಕ್ಷವೂ ಇಲ್ಲ.

ಬಂಧಮೋಕ್ಷೌ ನ ವಿದ್ಯೇತೇ ನಿತ್ಯಮುಕ್ತತಯಾತ್ಮನಃ ।

ಸರ್ವಮೂಲವಾದ ಪರಬ್ರಹ್ಮವೊಂದೇ ಯಾರಿಗೆ ಸರ್ವದಾ ಸರ್ವತ್ರ ಅನುಭವವಾಗುತ್ತಿರುತ್ತದೆಯೋ, ಬ್ರಹ್ಮೇತರವಾದ ಯಾವುದೊಂದೂ ಮನಸ್ಸಿಗೆ ತೋರದೋ, ಕಣ್ಣಿಗೆ ತೋರುವುದೆಲ್ಲ ಯಾರಪಾಲಿಗೆ ಮಾಯಾಚೇಷ್ಟಿತವೋ,

ಆತ್ಮನಿಂದ ಬೇರೆಯಾದದ್ದೊಂದೂ ಇಲ್ಲವೆಂಬ ದೃಢವಾದ ನಂಬಿಕೆಯಿಂದ ಯಾರ ಮನಸ್ಸಿಗೆ ಭೀತಿವ್ಯಾಮೋಹಕಾರಣಗಳಿಲ್ಲದೆ ಪರಿಪೂರ್ಣ ಶಾಂತಿ ಬರುತ್ತದೆಯೋ ಆತನು ಮುಕ್ತಪುರುಷ" (ಜೀವ, ಪುಟ ೭೮೪–೭೮೫).

ಇಲ್ಲಿ ಡಿ.ವಿ.ಜಿ.ಯವರು ಹೇಳಿದ ಮೋಕ್ಷಸ್ವರೂಪವೂ 'ಆತನು ಮುಕ್ತ ಪುರುಷ' ಎಂದು ಜೀವನ್ಮುಕ್ತಿಯನ್ನು ಅಂಗೀಕರಿಸಿರುವುದೂ 'ಅವನ ಪಾಲಿಗೆ ಬಂಧವೂ ಇಲ್ಲ, ಮೋಕ್ಷವೂ ಇಲ್ಲ' ಎಂದು ಪರಮಾರ್ಥವನ್ನು ತಿಳಿಸಿರುವುದೂ ಅದ್ವೈತಸಿದ್ಧಾಂತವನ್ನನುಸರಿಸಿಯೇ–ಎಂದು ಮತ್ತೆ ಹೇಳಬೇಕಾದ್ದಿಲ್ಲ. ಈ ಸಮಯದಲ್ಲಿ ಗೌಡಪಾದರ ಮಾಂಡೂಕ್ಯಕಾರಿಕೆಯ ಈ ಶ್ಲೋಕವು ನೆನಪಿಗೆ ಬರುತ್ತದೆ.

ನ ನಿರೋಧೋ ನ ಚೋತ್ಪತ್ತಿರ್ನ ಬದ್ಧೋ ನ ಚ ಸಾಧಕಃ ।
ನ ಮುಮುಕ್ಷುರ್ನವೈ ಮುಕ್ತ ಇತ್ಯೇಷಾ ಪರಮಾರ್ಥತಾ ॥
—ಮಾಂ. ಕಾ. ೨–೩೨

ಶ್ರೀಮಾನ್ ಡಿ. ಆರ್. ವೆಂಕಟರಮಣನ್ ಅವರು ಕನ್ನಡಕ್ಕೆ ಅನುವಾದಿಸಿರುವ 'ಅದ್ವೈತತತ್ತ್ವ ಮತ್ತು ಅನುಷ್ಠಾನ' ಎಂಬ ಗ್ರಂಥದಲ್ಲಿ ಡಿ.ವಿ.ಜಿ.ಯವರು ಹೀಗೆ ಹೇಳಿದ್ದಾರೆ: "ನಮ್ಮ ಸುತ್ತಮುತ್ತ ನಮಗೆ ಕಾಣಬರುವುದು ದ್ವೈತವೇ. ಅದರ ತೋರಿಕೆ ಎಷ್ಟು ಮಟ್ಟಿನದೆಂದರೆ, ಅದು ನಮ್ಮನ್ನು ದಾರಿತಪ್ಪಿಸಿ, ನಮ್ಮ ಮೌಲ್ಯವಿವೇಕಕ್ಕೆ ಮಂಕುಕವಿಸುವಷ್ಟು ಪರಿಣಾಮಕಾರಿಯಾದದ್ದು, ಶಕ್ತಿಯುಳ್ಳದ್ದು. ಇದನ್ನು ನಿರಾಕರಿಸುವುದೇ ಅದ್ವೈತ" (ಅದ್ವೈತ, ಪುಟ ೩೧). ಪರಬ್ರಹ್ಮವು ನಿರ್ಗುಣವೂ ನಿರ್ವಿಶೇಷವೂ ಆಗಿದೆಯೆಂದೂ ಲೀಲಾರ್ಥವಾಗಿ ಅದು ಜಗದ್ರೂಪವನ್ನು ತಾಳುತ್ತದೆಯೆಂದೂ ಡಿ.ವಿ.ಜಿ. ಬರೆದಿದ್ದಾರೆ: "ಬ್ರಹ್ಮ ಅಥವಾ ಪರಬ್ರಹ್ಮ ಈ ವಿಶ್ವದ ಮೂಲ. ಅದು ದೇಹವಿಲ್ಲದ್ದು. ರೂಪವಿಲ್ಲದ್ದು. ಯಾವ ಗುಣ ವಿಶೇಷವೂ ಇಲ್ಲದ್ದು. ಅದಕ್ಕೆ ವಿಶಿಷ್ಟವಾದ ಯಾವ ಗುರುತೂ ಇಲ್ಲ. ಅದು ಕೇವಲ ಸತ್ತು, ಇರಕತ್ಕದ್ದು. ಅದು ಎಲ್ಲವನ್ನೂ ತಿಳಿದದ್ದು. ಎಲ್ಲ ಶಕ್ತಿಯುಳ್ಳದ್ದು. ಕೇವಲ ಆನಂದ.

ತನ್ನಲ್ಲಿರುವುದನ್ನು ಅನುಭವಿಸಿ ಆನಂದಿಸುವುದಕ್ಕಾಗಿ ಪರಬ್ರಹ್ಮವು ರೂಪವನ್ನು ತಾಳುತ್ತದೆ. ಸೃಷ್ಟಿ, ಕಾಪಾಡುವಿಕೆ, ಪ್ರಲಯ–ಎಂಬ ಮೂರು ವಿಧದ ಲೋಕಕ್ರಮದ ಆಟವನ್ನಾಡುತ್ತದೆ. ಆಯಾ ಕೆಲಸಗಳನ್ನು ನೆರವೇರಿಸುವ ಕಾರಣದಿಂದ ಪರಬ್ರಹ್ಮವು ಬ್ರಹ್ಮ, ವಿಷ್ಣು, ಶಿವ–ಎಂಬ ಹೆಸರುಗಳಿಂದ ಕರೆಯಲ್ಪಡುತ್ತದೆ" (ಅದ್ವೈ, ಪುಟ ೧೯).

ಒಳ್ಳೆಯದು. ಅದ್ವೈತದರ್ಶನವು ಉಪನಿಷತ್ತುಗಳ ಪರಮಸಿದ್ಧಾಂತವೇ ಆಗಿರಬಹುದು. ಅದರ ಸಾಧನೆಯಿಂದ ಒಬ್ಬ ವ್ಯಕ್ತಿಗೆ ಮುಕ್ತಿಯೂ ದೊರಕ ಬಹುದು. ಆದರೆ ಸಾಮಾನ್ಯ ಜನರಿಗೆ ಬ್ರಹ್ಮಜ್ಞಾನವು ಲಭ್ಯವಾದದ್ದಲ್ಲ. ದೇಹ ಇರುವವರೆಗೆ ಲೋಕಸಂಬಂಧ ಉಂಟಷ್ಟೆ? ಲೋಕಸಂಬಂಧವಿದ್ದಮೇಲೆ ಲೋಕ ವ್ಯವಹಾರ ತಪ್ಪದು. ಅದ್ವೈತದರ್ಶನದಿಂದ ಲೋಕವ್ಯವಹಾರಕ್ಕೆ ಉಪಯೋಗ ವಾದೀತೆ? ಎಂಬ ಪ್ರಶ್ನೆಗೆ 'ಉಪಯೋಗವಿದೆ' ಎನ್ನುತ್ತಾರೆ ಡಿ.ವಿ.ಜಿ.ಯವರು. ಅವರು ಹೀಗೆ ಬರೆದಿದ್ದಾರೆ: "ಈ ಪ್ರಪಂಚವನ್ನು ದೊಡ್ಡ ರಣರಂಗವನ್ನಾಗಿ ಮಾರ್ಪಡಿಸುವಂತೆ ಹೆದರಿಸುವ ದೇಶ ದೇಶಗಳ ನಡುವೆ, ಸಮಾಜ ಸಮಾಜಗಳ ನಡುವೆ ಇರುವ ಅಸೂಯೆ ಪೈಪೋಟಿಗಳೆಂಬ ಮದಗ್ರಂಥಿಗಳನ್ನು ಕರಗಿಸುವ ಶಕ್ತಿ ಯುಳ್ಳ ಭೇಷಜ ಅದ್ವೈತ. ಯುರೋಪ್ ಖಂಡದಲ್ಲಿರುವ ರಾಜ್ಯಗಳು ಸಂಧಿ ಗಳನ್ನೂ ರಾಜಿಗಳನ್ನೂ ಮಾಡಿಕೊಳ್ಳುತ್ತಿವೆ. ಆದರೆ ಮನುಷ್ಯವರ್ಗಕ್ಕೆ ತೋರಿಸು ತ್ತಿರುವ ಆಸೆಗಳನ್ನು ಅವು ಈಡೇರಿಸಲಾರವು. ಮನುಷ್ಯವರ್ಗವನ್ನೇ ಒಂದೇ ಎಂದೂ ಒಂದಕ್ಕೊಂದು ನಂಟುಳ್ಳದ್ದೆಂದೂ ಹೇಳುವ ಮಾರ್ಗವೇ ಅದ್ವೈತ. ನಿಜ ವಾಗಿ ಎಲ್ಲ ಜೀವವೂ ಒಂದೇ ಎನ್ನುತ್ತದೆ ಅದ್ವೈತ. "ಏಕಂ ಸತ್" ಮಾನವನು ಈ ಸತ್ಯವನ್ನು ಅರಿಯುವಂತೆ ಆದರಂತೆ ನಡೆಯುವಂತೆ ಭಗವಂತನು ಅನುಗ್ರಹಿಸಲಿ.

ಉದಾತ್ತಗುಣ, ಸರ್ವಸಮಭಾವ, ಸಕಲ ಮಾನವ ಭ್ರಾತೃಭಾವ–ಇವೆಲ್ಲವೂ ಹರಿಜನರೆಂದು ಕರೆಯಲ್ಪಡುವ ನಮ್ಮ ಬಂಧುಗಳಿಗೂ ಯಾವ ಸಂದೇಹವೂ ಇಲ್ಲದೆ ಅನ್ವಯವಾಗುತ್ತದೆ" (ಅದ್ವೈ. ಪುಟ ೮೮). ಈ ವಿಷಯವನ್ನೇ ಮುಂದುವರಿಸುತ್ತ ಈ ರೀತಿ ಬರೆಯುತ್ತಾರೆ: "ನಿಜವಾದ ಅದ್ವೈತಿಯು ವಿಶ್ವಬಂಧು, ಜಗದ್ರಾಷ್ಟ್ರಕ. ಅವನು ತನ್ನದು ಇತರರದು ಎಂಬ ವಿಷಯದಲ್ಲಿ ತಾರತಮ್ಯಗಣನೆಯನ್ನೆಸಗು ವುದಿಲ್ಲ.

ಅಯಂ ನಿಜಃ ಪರೋ ವೇತಿ ಗಣನಾ ಲಘುಚೇತಸಾಮ್ ।
ಉದಾರಚರಿತಾನಾಂ ತು ವಸುಧೈವ ಕುಟುಂಬಕಮ್ ॥

ಅದ್ವೈತಿಯು ಯಾವ ಒಂದು ದೇಶವನ್ನೋ ಜನಸಮೂಹವನ್ನೋ ಜಾತಿ ಯನ್ನೋ ತನ್ನದೆಂದುಕೊಳ್ಳುವುದಿಲ್ಲ. ಎಲ್ಲ ಸಮಾಜಗಳೂ ಜಾತಿಗಳೂ ಜನ ಸಮೂಹಗಳೂ ಅವನವೇ. ಅವನು ಎಲ್ಲವನ್ನೂ ಸಮದೃಷ್ಟಿಯಿಂದ ನೋಡು ತ್ತಾನೆ.

ಮಾತಾ ಚ ಕಮಲಾದೇವೀ ಪಿತಾ ದೇವೋ ಜನಾರ್ದನಃ ।
ಬಾಂಧವಾ ವಿಷ್ಣುಭಕ್ತಾಶ್ಚ ಸ್ವದೇಶೋ ಭುವನತ್ರಯಮ್ ॥

ಅಥವಾ

ಮಾತಾ ಚ ಗಿರಿಜಾದೇವೀ ಪಿತಾ ದೇವೋ ಮಹೇಶ್ವರಃ ।
ಬಾಂಧವಾ ಶಿವಭಕ್ತಾಶ್ಚ ಸ್ವದೇಶೋ ಭುವನತ್ರಯಮ್ ॥

.......ಅದ್ವೈತ ಭಾವನೆಯನ್ನು ಸರ್ವತ್ರ ಒಪ್ಪಿಕೊಂಡ ಪಕ್ಷಕ್ಕೆ ಎಲ್ಲ ವಿಧವಾದ ಹಗೆತನ, ಒಂದು ಜನಾಂಗ ಇನ್ನೊಂದರ ಮೇಲೆ ತೋರಿಸುವ ಶತ್ರುತ್ವ, ಒಬ್ಬ ಮನುಷ್ಯನು ಇನ್ನೊಬ್ಬನ ಮೇಲೆ ಕಾರುವ ದ್ವೇಷ—ಇವೆಲ್ಲ ಪರಿಹಾರವಾಗಿಬಿಡುತ್ತದೆ ಎಂದು ನನ್ನ ನಂಬಿಕೆ" (ಅದ್ವೈ, ಪುಟ ೮೯–೯೦).

ಅದ್ವೈತಿಯು ಲೋಕಸಂಪರ್ಕವನ್ನು ಬಿಟ್ಟುಬಿಡುತ್ತಾನೆಂಬುದನ್ನು ಡಿ.ವಿ.ಜಿ. ಯವರು ಒಪ್ಪುವುದಿಲ್ಲ. ಕುಟುಂಬವ್ಯವಹಾರ ಮಾತ್ರವಲ್ಲದೆ ಸಾರ್ವಜನಿಕ ವ್ಯವಹಾರಗಳಲ್ಲಿ ಸಹ ವೇದಾಂತಿಯು ಶ್ರದ್ಧೆಯಿಂದ ಕರ್ತವ್ಯವನ್ನು ನಿರ್ವಹಿಸುತ್ತಾನೆಂಬುದು ಅವರ ಅಭಿಪ್ರಾಯ. ಈ ವಿಷಯವಾಗಿ ಶ್ರೀ ವಿದ್ಯಾರಣ್ಯ ಸ್ವಾಮಿಗಳು ಪಂಚದಶಿಯಲ್ಲಿ ಹೇಳಿದ "ಜ್ಞಾನಿನಾಚರಿತುಂ ಶಕ್ಯಂ ಸಮ್ಯಗ್ರಾಜ್ಯಾದಿಲೌಕಿಕಮ್" (ಪಂಚ, ೯–೧೧೪) ಎಂಬ ವಚನವನ್ನು ಮತ್ತೆ ಮತ್ತೆ ಉದಾಹರಿಸಿದ್ದಾರೆ. ರಾಜಕೀಯದಲ್ಲಿ ತೊಡಗಲು ಜ್ಞಾನಿಯಾದವನೇ ಉತ್ತಮ ಅಧಿಕಾರಿಯೆಂದು ಈ ರೀತಿ ಸಮರ್ಥಿಸಿದ್ದಾರೆ "ರಾಜಕೀಯವೂ ಮತ್ತು ಇತರ ಲೌಕಿಕ ವ್ಯವಹಾರಗಳೂ ಸರಿಯಾಗಿ ನಿರ್ವಹಿಸಲ್ಪಡಬೇಕಾದರೆ – ಯಾವ ಪಕ್ಷಕ್ಕೂ ಅನ್ಯಾಯವಾಗದಂತೆ ತಿಳಿವಳಿಕೆಯಿಂದ ನಡೆಯಬೇಕಾದರೆ–ಅದು ಜ್ಞಾನಿಯಿಂದ ಮಾತ್ರ ಸಾಧ್ಯ. ಒಂದು ಸರಿಯಾದ ಮೌಲ್ಯಶ್ರೇಣಿಯನ್ನು ಹೊಂದಿರುವನೆಂದು ಜ್ಞಾನಿಯನ್ನು ಮಾತ್ರ ನಂಬಬಹುದು....ಅದ್ವೈತಿಗೆ ಯಾರೊಬ್ಬರ ವಿಚಾರದಲ್ಲಾಗಲಿ ಯಾವ ಸ್ಥಳಕ್ಕಾಗಲಿ ಅಂಟು ಇಲ್ಲ.......ಅವನು ಎಷ್ಟರಮಟ್ಟಿಗೆ ದೇಶಭಕ್ತನೋ ಅಷ್ಟರಮಟ್ಟಿಗೆ ವಿಶ್ವ ಭಕ್ತನೂ ಹೌದು. ಎಲ್ಲರೂ ಒಬ್ಬನೇ ಭಗವಂತನ ಸಂರಕ್ಷಣೆಯಲ್ಲಿರುವುದರಿಂದ, ಎಲ್ಲರಲ್ಲಿಯೂ ಅವರು ಗುರುತಿಸಲಿ ಗುರುತಿಸದೆ ಹೋಗಲಿ–ಒಂದೇ ಚೈತನ್ಯವು ವ್ಯಾಪಿಸಿರುವುದರಿಂದ ಅವನು ಒಂದಕ್ಕೂ ಇನ್ನೊಂದಕ್ಕೂ ವ್ಯತ್ಯಾಸವನ್ನು ಕಾಣನು. ಎಲ್ಲರೂ ಅವನಿಗೆ ಸೋದರರೇ" (ಅದ್ವೈ, ೭೯–೮೦).

ಡಿ.ವಿ.ಜಿ.ಯವರು ಅದ್ವೈತದರ್ಶನದ ವಿಷಯವಾಗಿ ತಳೆದ ನಿಲುವನ್ನು ಇದುವರೆಗೆ ಸ್ಥೂಲವಾಗಿ ಹೇಳಿದ್ದಾಯಿತು. ಶಾಸ್ತ್ರೀಯ ಪರಿಭಾಷೆಗಳ ಗೊಂದಲದೊಳಕ್ಕಿಳಿಯದೆ ಅದ್ವೈತದ ಸ್ವರೂಪ, ಅದ್ವೈತಿಯ ವರ್ತನೆ, ಅದ್ವೈತ ಮತ್ತು ಲೋಕವ್ಯವಹಾರಗಳ ಸಂಬಂಧ, ಅದರಿಂದಾಗಬಹುದಾದ ಉಪಯೋಗ–ಇವನ್ನು ಸ್ವಲ್ಪಮಟ್ಟಿಗೆ ಅವರ ದೃಷ್ಟಿಯಲ್ಲಿಯೇ ವಿಚಾರಿಸಿದ್ದಾಯಿತು. ಡಿ.ವಿ.ಜಿ.ಯವರು

ದ್ವೈತ, ವಿಶಿಷ್ಟಾದ್ವೈತಗಳ ವಿಷಯವಾಗಿ ಯಾವ ಭಾವನೆಯನ್ನು ತಳೆದಿದ್ದರು, ಅವನ್ನು ಹೇಗೆ ಸಮನ್ವಯಗೊಳಿಸಿಕೊಂಡಿದ್ದರು, ಅನ್ಯ ಮತಧರ್ಮಗಳ ವಿಷಯದಲ್ಲಿ ಅವರ ಅಭಿಪ್ರಾಯವೇನು–ಎಂಬುದನ್ನು ನೋಡೋಣ.

ವೇದಾಂತದ ಮತಪ್ರಭೇದಗಳಾದ ದ್ವೈತ, ವಿಶಿಷ್ಟಾದ್ವೈತ, ಅದ್ವೈತ ಎಂಬ ಸಿದ್ಧಾಂತಗಳು ವೇದಾಂತಪರ್ವತಶ್ರೇಣಿಯ ಮೂರು ಉನ್ನತ ಶಿಖರಗಳೆಂದು ಡಿ.ವಿ.ಜಿ.ಯವರು ಹೇಳಿದ್ದಾರೆ (ಜೀವ ಪು. ೬೪೮). ನಾನಾ ಸಂಸ್ಕಾರವಿಶೇಷ ಗಳಿಂದ ಮಾನವನ ಅಭಿರುಚಿಯೂ ಬುದ್ಧಿಸಾಮರ್ಥ್ಯವೂ ವಿಭಿನ್ನವಾಗುವುದರಿಂದ, ಆಸ್ತಿಕವರ್ಗದಲ್ಲಿ ಅಂತಃಕರಣಭೇದಗಳನ್ನು ಮೂರು ಗುಂಪುಗಳಾಗಿ ಅವರು ವಿಂಗಡಿಸುತ್ತಾರೆ.

೧. ಸ್ವತಾಸಮರ್ಪಣ ಸಂತೋಷದ್ದು–ಇದರಲ್ಲಿ ಜೀವನು ತನ್ನ ಸರ್ವಸ್ವವನ್ನೂ ಭಗವದರ್ಪಣ ಮಾಡುವುದರಲ್ಲಿ ಸಂತೋಷವನ್ನು ಕಾಣುತ್ತಾನೆ. ಇದರಲ್ಲಿ ಎರಡು ವಸ್ತುಗಳ ಇರುವಿಕೆ ಬೇಕು. ಸ್ವಾಮಿ–ಸೇವಕ ಅಥವಾ ಪೂಜ್ಯ–ಪೂಜಕ. ಇದು ದ್ವೈತ.

೨. ಸ್ವತಾಸಹಭಾಗ ಸಂತೋಷದ್ದು. ಜೀವನು ಭಗವಲ್ಲೀಲೆಯಲ್ಲಿ ಒಂದು ಅಂಶ ಪ್ರಾಯನಾಗಿ ಆ ಲೀಲಾನಂದದಲ್ಲಿ ಭಾಗಸ್ಥನಾಗಬೇಕೆನ್ನುವುದು. ಇದರಲ್ಲಿ ಸ್ವಾಮಿ-ಭೃತ್ಯ ಎಂಬ ಭೇದವು ಸೇವಾಕಾಲದಲ್ಲಿದ್ದರೂ ಆನಂದಾನುಭವದಲ್ಲಿ ದ್ವೈತವು ಹೋಗಿ ಏಕತ್ವದಲ್ಲಿ ಪರ್ಯವಸಾನ. ಇದು ವಿಶಿಷ್ಟಾದ್ವೈತ.

೩. ಸ್ವತಾವಿಲಯನ–ಜೀವನು ಯಾವುದನ್ನು ಸರ್ವವ್ಯಾಪಿಯೆಂದೂ ಸರ್ವರೂಪಿ ಯೆಂದೂ ಭಾವಿಸಿದ್ದಾನೋ ಅದರಲ್ಲಿ ಅವನು ಕರಗಿಹೋಗಿ ತಾನು ಬೇರೆಯೆಂಬ ತನ್ನತನವನ್ನೇ ಕಳೆದುಕೊಳ್ಳುವುದು. ಇದು ಅದ್ವೈತ (ಜೀವ, ಪುಟ ೬೫೬).

ಈ ವಿಷಯವನ್ನು ಡಿ.ವಿ.ಜಿ.ಯವರು ವಿಸ್ತಾರವಾಗಿ ವಿವೇಚಿಸಿದ್ದಾರೆ. ಅಭಿರುಚಿಯ ಭೇದದಿಂದ ಮತತ್ರಯಗಳು ಮೊದಲಿನಿಂದಲೂ ಇದ್ದವೆಂದೂ ಈ ವಿಷಯವಾಗಿ ಕಲಹವೂ ವಾದವೂ ನಿರರ್ಥಕವೆಂದೂ ಹೇಳಿದ್ದಾರೆ. ಇದನ್ನು ಪ್ರಾಚೀನರ ವಚನಗಳಿಂದ ಸಮರ್ಥಿಸುತ್ತ ಈ ವಚನವನ್ನು ಉದಾಹರಿಸುತ್ತಾರೆ–

ದೇಹಬುದ್ಧ್ಯಾತು ದಾಸೋಽಹಂ ಜೀವಬುದ್ಧ್ಯಾತ್ವದಂಶಕಃ ।
ಆತ್ಮಬುದ್ಧ್ಯಾ ತ್ವಮೇವಾಹಮಿತಿ ಮೇ ನಿಶ್ಚಿತಾ ಮತಿಃ ॥
(ಜೀವ, ಪುಟ ೬೭೫).

'ಅದ್ವೈತ ತತ್ತ್ವ ಮತ್ತು ಅನುಷ್ಠಾನ' ಎಂಬ ಗ್ರಂಥದಲ್ಲಿ ಅದ್ವೈತ ವೇದಾಂತವೇ ಪ್ರಧಾನವಾಗಿ ಪ್ರಸ್ತುತವಾಗಿದೆ. ಡಿ.ವಿ.ಜಿ.ಯವರ ಕೂಲಂಕಷವಾದ ವೇದಾಂತಚಿಂತನವನ್ನು ಈ ಗ್ರಂಥದಲ್ಲಿ ಕಾಣಬಹುದು. ಯಾವ ಪೂರ್ವಗ್ರಹವೂ ಇಲ್ಲದೆ ಮತತ್ರಯಗಳನ್ನು ತೂಗಿ ತೂಗಿ ಪ್ರತಿಯೊಂದರಿಂದಲೂ ಗುಣಗ್ರಹಣ ಮಾಡುವ ಔದಾರ್ಯವನ್ನಿಲ್ಲಿ ನೋಡಬಹುದು. ಅವರ ಈ ಮಾತುಗಳನ್ನು ಸರ್ವರೂ ಅವಶ್ಯವಾಗಿ ಮನನ ಮಾಡಬೇಕು–

"ನನ್ನ ಈ ಮಾತುಗಳನ್ನು ಮುಗಿಸುವುದಕ್ಕೆ ಮೊದಲು ಅದ್ವೈತ, ವಿಶಿಷ್ಟಾದ್ವೈತ ಮತ್ತು ದ್ವೈತ. ಶೈವ ಮತ್ತು ವೈಷ್ಣವ–ಈ ಮತಗಳನ್ನು ಕುರಿತ ತಾರತಮ್ಯ ಗಣನೆಯಿಂದ ನಡೆಯುವ ಜಗಳಗಳಿಗೆ ಪಂಡಿತರುಗಳೂ ವೇದಾಂತಾಚಾರ್ಯರುಗಳೂ ಪೂರ್ಣವಿರಾಮ ಹಾಕಬೇಕೆಂದು ಬೇಡಿಕೊಳ್ಳುತ್ತೇನೆ. ಈ ವಾದ ವಿವಾದಗಳು, ನೂರಾರು ವರ್ಷಗಳಿಂದಲೂ ಸಾಗಿಬರುತ್ತಿವೆ....ಇವು ಮೂರೂ ಆಸ್ತಿಕ ಮತಗಳೆಂದು ತಿಳಿಯಬೇಕಾದದ್ದು, ಸ್ಪಷ್ಟವಾಗಿ ತಿಳಿಯಬೇಕಾದದ್ದು. ಈ ಮೂರು ಮತಗಳೂ ಶ್ರುತಿಯ ತಳಪಾಯದ ಮೇಲೆ ನಿಂತಿರತಕ್ಕವು" (ಅದ್ವೈ ಪುಟ ೮೪).

"ವಾಸ್ತವವಾಗಿ ಈ ಮೂರು ಮತಗಳಿಗೂ ಆಸ್ತಿಕತೆಯಲ್ಲಿ ಸ್ಥಾನ ಉಂಟು. ಅವುಗಳಿಗೆಲ್ಲ ಸಮಾನವಾದ ಪ್ರಾಮಾಣ್ಯವಿದೆ. ಸಮಾನವಾದ ಗೌರವಸ್ಥಾನವಿದೆ. ಇದನ್ನು ನಾವೆಲ್ಲರೂ ಒಪ್ಪಿಕೊಳ್ಳೋಣ. ಇದರಲ್ಲಿ ಒಂದು ಹೆಚ್ಚು ಇನ್ನೊಂದು ಕಡಮೆ ಎಂಬ ಜಗಳಗಳು ವೇದಮತದಲ್ಲಿ ನಂಬಿಕೆಯುಳ್ಳ ಸಮಸ್ತ ಹಿಂದೂ ಸಮಾಜವನ್ನು ದುರ್ಬಲವನ್ನಾಗಿ ಮಾಡುವುದಕ್ಕೆ ಸಹಾಯವಾಗಿಬಿಟ್ಟಿವೆ"

ಡಿ.ವಿ.ಜಿ.ಯವರು ಹೇಳಿದ್ದು ವಾಸ್ತವವಾದ ಸಂಗತಿ. ಇನ್ನು ಸಾವಿರ ವರ್ಷಗಳವರೆಗೆ ಖಂಡನೆ ಮಂಡನೆಗಳು ನಡೆದರೂ ಸರ್ವಸಂಮತವಾದ ಒಂದು ಸಿದ್ಧಾಂತ ಬರಲಾರದು. ಖಂಡನೆಗಳು ಸರ್ವಥಾ ಯೋಗ್ಯವಲ್ಲವೆಂದು ವಿವೇಕಿಗಳು ಒಪ್ಪುತ್ತಾರೆ. ಜನರ ಅಭಿರುಚಿಗಳೂ ಅಧಿಕಾರಗಳೂ ಭಿನ್ನಭಿನ್ನವಾಗಿ ಯಾವಾಗಲೂ ಇರತಕ್ಕವೇ. ಸೂತಸಂಹಿತೆಯ ಯಜ್ಞವೈಭವ ಖಂಡದಲ್ಲಿರುವ ಈ ಶ್ಲೋಕವು ಇಲ್ಲಿ ಸ್ಮರಣೀಯ–

ತರ್ಕೈರೇತೇ ಹಿ ಮಾರ್ಗಾಸ್ತು ನ ಹಂತವ್ಯಾ ಮನೀಷಿಭಿಃ ।
ಸೋಪಾನಕ್ರಮತೋ ದೇವಾ ವೇದಮಾರ್ಗಸ್ಯ ಹೇತವಃ ॥

'ಬುದ್ಧಿಶಾಲಿಗಳಾದವರು ಈ ವಿಭಿನ್ನ ಮಾರ್ಗಗಳನ್ನು ತರ್ಕಬಲದಿಂದ

ಖಂಡಿಸುವುದಕ್ಕೆ ಹೋಗಬಾರದು. ಇವೆಲ್ಲವೂ ವೇದಮಾರ್ಗಕ್ಕೆ ಸೇರಿಸುವ ಮೆಟ್ಟಿಲು ಗಳು'

ತಾತ್ಪರ್ಯವಿಷ್ಟು—

ನೂರಾರು ಮತವಿಹುದು ಲೋಕದುಗ್ರಾಣದಲ್ಲಿ
ಆರಿಸಿಕೊ ನಿನ್ನ ರುಚಿಗೊಪ್ಪುವುದನದರೊಳ್ ।
ಸಾರದಡುಗೆಯುನೊಳವಿಚಾರದೊಲೆಯಲಿ ಮಾಡು
ಬೇರೆ ಮತಿ ಬೇರೆ ಮತ–ಮಂಕುತಿಮ್ಮ ॥

ಈಗ ಮಂಕುತಿಮ್ಮನ ಕಗ್ಗವನ್ನು ನೋಡಬಹುದು–ಮೊದಲಿನ ಮಂಗಳಪದ್ಯ ಹೀಗಿದೆ–

ಶ್ರೀವಿಷ್ಣು ವಿಶ್ವಾದಿಮೂಲ ಮಾಯಾಲೋಲ
ದೇವ ಸರ್ವೇಶ ಪರಬೊಮ್ಮನೆಂದು ಜನಂ ।
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ
ಆವಿಚಿತ್ರಕೆ ನಮಿಸೊ–ಮಂಕುತಿಮ್ಮ ॥

ಇಲ್ಲಿ ವಿಶ್ವಾದಿಮೂಲ, ಮಾಯಾಲೋಲ–ಎಂಬೆರಡು ಶಬ್ದಗಳು ಅದ್ವೈತ ಭಾವನೆಯಿಂದಲೇ ಬಂದಿವೆಯೆಂದು ನನ್ನ ತಿಳಿವಳಿಕೆ. ವಿಶ್ವಾದಿ ಅಥವಾ ವಿಶ್ವ ಮೂಲ ಎಂದರೆ ಸಾಕಾಗಿತ್ತು. ಆದಿಮೂಲವೆಂದರೆ ಆದಿಕಾರಣ ಎಂಬ ಅರ್ಥ ಸಾಮಾನ್ಯವಾಗಿ ಸ್ಫುರಿಸುತ್ತದೆಯಾದರೂ ಡಿ.ವಿ.ಜಿ ಯವರ ಅಭಿಪ್ರಾಯ ಅನ್ಯಥಾ ಇದ್ದಿರಬೇಕೆಂದು ನನ್ನ ಊಹೆ. ಅದ್ವೈತಸಿದ್ಧಾಂತದಲ್ಲಿ ಪರಬ್ರಹ್ಮವು ಜಗತ್ತಿಗೆ ಉಪಾದಾನಕಾರಣವೂ ನಿಮಿತ್ತಕಾರಣವೂ ಆಗಿದೆಯೆಂದು ಒಪ್ಪಿದ್ದಾರೆ. ಗಡಿಗೆಗೆ ಮಣ್ಣು ಉಪಾದಾನಕಾರಣ. ಕುಂಬಾರನು ನಿಮಿತ್ತಕಾರಣ. ಬ್ರಹ್ಮವೇ ಜಗತ್ತಾಗಿ ತೋರುವುದರಿಂದ ಅದು ಉಪಾದಾನಕಾರಣ, ಮಣ್ಣು ಗಡಿಗೆಯಾಗಿ ತೋರುವಂತೆ. ಕುಂಬಾರನಂತೆ ಬೇರೊಬ್ಬ ಕರ್ತನೇ ಇಲ್ಲದಿರುವುದರಿಂದ ಬ್ರಹ್ಮವೇ ನಿಮಿತ್ತ ಕಾರಣವೂ ಆಗಿದೆ. ವಿಶ್ವಕ್ಕೆ ಆದಿಯೂ ವಿಶ್ವಕ್ಕೆ ಮೂಲವೂ ಆದದ್ದು ಬ್ರಹ್ಮವೆಂದು ಅಭಿಪ್ರಾಯ. ಇದು ಹೇಗೆ ಸಾಧ್ಯವೆಂಬುದನ್ನು ಮಾಯಾಲೋಲ ಎಂಬ ಶಬ್ದವು ಸ್ಪಷ್ಟಪಡಿಸುತ್ತದೆ. ಮಾಯಾಶಕ್ತಿಯಿಂದ ಇದೆಲ್ಲವೂ ಸಾಧ್ಯವೆಂದು ಆಶಯ. ಬ್ರಹ್ಮವೇ ಜಗತ್ತಾಗಿ ಜೀವವಾಗಿ ತೋರಿಕೊಳ್ಳುತ್ತದೆಯೆಂದು ಮೂರನೆಯ ಪದ್ಯ ದಲ್ಲಿ ಸ್ಪಷ್ಟವಾಗಿದೆ–

ಇಹುದೊ ಇಲ್ಲವೊ ತಿಳಿಯಗೊಡದೊಂದು ವಸ್ತು ನಿಜ
ಮಹಿಮೆಯಿಂ ಜಗವಾಗಿ ಜೀವವೇಷದಲಿ
ವಿಹರಿಪುದು...॥

'ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ' ಎಂಬುದು ಅದ್ವೈತಸಿದ್ಧಾಂತ. ಈ ಸಿದ್ಧಾಂತಕ್ಕೆ ಸವಾಲನ್ನು ಹಾಕುವಂತಿದೆ ಈ ಪದ್ಯ–

ಬ್ರಹ್ಮವೇ ಸತ್ಯ ಸೃಷ್ಟಿಯು ಮಿಥ್ಯೆಯೆನ್ನುವೊಡೆ
ಸಂಬಂಧವಿಲ್ಲವೇನಾ ವಿಷಯಯುಗಕೆ ?
ನಮ್ಮ ಕಣ್ಮನಸುಗಳೆ ನಮಗೆ ಸಟೆ ಪೇಳುವೊಡೆ
ನೆಮ್ಮುವುದದಾರನೋ ?–ಮಂಕುತಿಮ್ಮ ॥

ನಮ್ಮ ಕಣ್ಣಿಗೆ ಜಗತ್ತು ಸತ್ಯವಾಗಿ ಕಾಣಿಸುತ್ತಿದೆ. ಪ್ರತ್ಯಕ್ಷವಾಗಿ ಕಾಣು ವುದನ್ನೇ ಸುಳ್ಳೆಂದು ಹೇಳಿದರೆ ನಿಮ್ಮ ಮಾತನ್ನು ನಂಬಲಾದೀತೆ? ಎಂಬುದು ಪ್ರಶ್ನೆ. ಜಗತ್ತು ವ್ಯಾವಹಾರಿಕ ಸತ್ಯವೆಂದು ಅದ್ವೈತಿಯು ಉತ್ತರಿಸುತ್ತಾನೆ. ಇದು ವಿಸ್ತಾರವಾಗಿ ಉತ್ತರಿಸಬೇಕಾದದ್ದು. ಈ ಪ್ರಕರಣದಲ್ಲಿ ತಿಮ್ಮನು ಪ್ರಶ್ನೆಗಳ ಸರಮಾಲೆಯನ್ನೇ ಎತ್ತಿದ್ದಾನೆ. ಪ್ರಶ್ನೆಯೇ ಸಿದ್ಧಾಂತವಲ್ಲ. ಗುರುವೆನಿಸಿದವನು ಉತ್ತರ ಕೊಡಬೇಕು.

ಸುರಿದು ಪ್ರಶ್ನೆಗಳನುತ್ತರವ ಕುಡೆ ಬಾರದನ
ಗುರುವೆಂದು ಕರೆಯುವೆಯ–ಮಂಕುತಿಮ್ಮ ॥ (೩೩)

ಬ್ರಹ್ಮವಸ್ತು ಅನುಭವಕ್ಕೆ ಮಾತ್ರ ಗೋಚರವಾಗತಕ್ಕದ್ದು. ತರ್ಕದಿಂದ ಅದರ ಸ್ವರೂಪವನ್ನು ತಿಳಿಯಲಾಗುವುದಿಲ್ಲ. 'ನೈಷಾತರ್ಕೇಣ ಮತಿರಾಪನೇಯಾ' ಎನ್ನುತ್ತದೆ ಉಪನಿಷತ್ತು. ಅದನ್ನೇ ತಿಮ್ಮನು–

ತತ್ತ್ವ ನಿಲುಕದೆಮ್ಮಯ ತರ್ಕಕರ್ಕಶಾಂಕುಶಕೆ ।
ಸುಳಿವುದಾಗಿ ಗಳದು ಸೂಕ್ಷ್ಮಾನುಭವಗಳಲಿ
ತಿಳಿಮನದೆ ನೋಳ್ಪರ್ಗೆ ॥ (೫೪)

ಎನ್ನುತ್ತಾನೆ.

ಬ್ರಹ್ಮವು ತಾನು ಬಹುವಾಗಬೇಕೆಂದು ಬಯಸಿ ಜೀವರೂಪವನ್ನು ಜಗದ್ರೂಪವನ್ನು ತಳೆಯಿತಂತೆ. 'ಬಹುಸ್ಯಾಂ ಪ್ರಜಾಯೇಯೇತಿ' ಅದು ಬಹು ವಾದರೂ ತನ್ನ ಸ್ವರೂಪದಲ್ಲಿ ಯಾವ ಮಾರ್ಪಾಡೂ ಆಗಲಿಲ್ಲ. ಅದು ಯಾವ ಲೇಪವೂ ಇಲ್ಲದೆ ಶುದ್ಧವಾಗಿಯೇ ಉಳಿದುಕೊಂಡಿದೆ. ಏಕೆಂದರೆ, ಅದ್ವೈತಿಗಳು ಕಾರ್ಯವು ವಿವರ್ತವೆಂದು ಹೇಳುತ್ತಾರೆ, ಪರಿಣಾಮವೆಂದಲ್ಲ. ಹಾಲು ಮೊಸರಾಗು ವುದು ಪರಿಣಾಮ. ಹಗ್ಗವು ಹಾವಾಗಿ ತೋರುವುದೂ ಕಪ್ಪೆಚಿಪ್ಪು ಬೆಳ್ಳಿಯಾಗಿ

ತೋರುವುದೂ ವಿವರ್ತ. ವಿವರ್ತದಲ್ಲಿ ಹಗ್ಗಕ್ಕಾಗಲಿ ಕಪ್ಪೆಚಿಪ್ಪಿಗಾಗಲಿ ಯಾವ ವಿಕಾರವೂ ಉಂಟಾಗಿರುವುದಿಲ್ಲ.

ಬಹುವಾಗಲೆಳಸಿ ತಾನೊಬ್ಬಂಟಿ ಬೊಮ್ಮ ನಿಜ
ಮಹಿಮೆಯಿಂ ಸೃಜಿಸಿ ವಿಶ್ವವನಲ್ಲಿ ನೆಲೆಸಿ ।
ವಹಿಸಿ ಜೀವತೆಯ ಮಾಯೆಯ ಸರಸವಿರಸದಲಿ
ವಿಹರಿಪನು ನಿರ್ಲಿಪ್ತ–ಮಂಕುತಿಮ್ಮ ॥

'ತಸ್ಮಾದೇಕಾಕೀ ನ ರಮತೇ' ಎನ್ನುತ್ತದೆ ಉಪನಿಷತ್ತು. ಒಂಟಿಯಾದ ಬ್ರಹ್ಮವಸ್ತುವಿಗೆ ಆನಂದವಿಲ್ಲದ್ದರಿಂದ ಅದೇ ಬಹುವಾಯಿತಂತೆ. ಇಸ್ಪೀಟು ಆಡ ತಕ್ಕವನಿಗೆ ಆಡತಕ್ಕವರಿಲ್ಲದಾಗ ಬೇಸರವಾಗುತ್ತದೆ. ಒಬ್ಬನೇ ಇತರರ ಪಾತ್ರ ವನ್ನೂ ವಹಿಸಿ ಆಟವಾಡುತ್ತ ವಿನೋದಿಸುವುದುಂಟು. ಇದಕ್ಕೆ ಹೋಲಿಸಿ ಡಿವಿಜಿ ಯವರು ಬರೆಯುತ್ತಾರೆ.

ಚೀಟಿಯಾಟದ ಬಿನದಿ ತಾನೊರ್ವನಿರ್ವರವೊಲ್
ಆಟವಾಡುತಲಿ ತನ್ನೊರ್ತನವ ಮರೆವಾ ।
ಮಾಟದಲಿ ಬೊಮ್ಮನುಂ ತನ್ನೇಕತೆಯ ಜೀವ
ಪಾಟಿಯಲಿ ಮರೆತಿಹನು–ಮಂಕುತಿಮ್ಮ ॥

'ತನ್ನೇಕತೆಯ ಜೀವಪಾಟಿಯಲಿ ಮರೆತಿಹನು'. ಬ್ರಹ್ಮವು ವಿನೋದಕ್ಕಾಗಿ ಜೀವರೂಪವನ್ನು ತಳೆದಾಗ, ಜೀವನು ತಾನು ನಿಜವಾಗಿಯೂ ಯಾರು ಎಂಬುದನ್ನು ಮರೆತುಬಿಟ್ಟನಂತೆ. ಮರೆಯುವಂತೆ ಮಾಡಿದ ಮಾಯೆಯೇ ಅವನ ಉದ್ಧಾರಕ್ಕಾಗಿ ನರನಾರಿಯರ ಪರಸ್ಪರ ಮೋಹವನ್ನು ಸೃಷ್ಟಿಸಿದಳಂತೆ. ಜಗತ್ತಿನ ಸಮಸ್ತ ವ್ಯವಹಾರಗಳಿಗೂ ಈ ಮೋಹವೇ ಕಾರಣವಾಯಿತು. ಮೋಹದಿಂದ ವಂಶ, ಅದಕ್ಕಾಗಿ ಮನೆ, ನೆರೆಹೊರೆಗಳ್, ಊರು, ರಾಷ್ಟ್ರಗಳು, ಸಂಘಗಳು, ಅದರಿಂದ ನೀತಿ ನಯ, ಕುಲ ಗೋತ್ರ, ರಾಜ್ಯ, ಮಠ, ಧರ್ಮಸಂಸ್ಥೆಗಳು ನಿರ್ಮಿತವಾದವು. ಇದರಿಂದ ಜೀವಾತ್ಮನ ಉದ್ಧಾರ ಹೇಗೆ ? ಎಂದರೆ 'ಅದರಿಂದೆ ಮಮತಾನಾಶದವ ಕಾಶವದರಿನಾತ್ಮವಿಕಾಸ ಮಂಕುತಿಮ್ಮ' (೪೦೭) ಎಂದು ಡಿವಿಜಿ ಹೇಳುತ್ತಾರೆ. ನನ್ನದು ಎಂಬ ಸಂಕುಚಿತವಾದ ಮಮತೆ ಹೆಂಡತಿ ಮಕ್ಕಳಲ್ಲಿ ಕುಟುಂಬದಲ್ಲಿ ಹರಡಿ, ಹಾಗೆಯೇ ಸಮಾಜ, ರಾಜ್ಯ, ರಾಷ್ಟ್ರಗಳಲ್ಲಿ ವಿಕಸಿತವಾಗಿ 'ವಸುಧೈವ ಕುಟುಂಬಕಂ' ಎಂಬ ವಿಶಾಲಭಾವನೆಗೆ ಅವಕಾಶವನ್ನೀಯುತ್ತದೆಯೆಂದು ಅವರ ಪ್ರತಿಪಾದನೆ ಇದೆ. ಆದ್ದರಿಂದಲೇ 'ಗೌರವಿಸು ಜೀವನವ' ಎಂದು ಮತ್ತೆ ಮತ್ತೆ ಹೇಳುತ್ತಾರೆ.

ತ್ಯಕ್ತವ್ಯೋ ಮಮಕಾರಸ್ತ್ಯಕ್ತುಂ ಯದಿ ಶಕ್ಯತೇ ನಾಸೌ ।
ಕರ್ತವ್ಯೋ ಮಮಕಾರಃ ಕಿಂತು ಸ ಸರ್ವತ್ರ ಕರ್ತವ್ಯಃ ॥

—ನೀಲಕಂಠ ದೀಕ್ಷಿತರು

ಆದರೆ ಈ ನರನಾರಿಯರ ವ್ಯಾಮೋಹದಿಂದಾದ ಸಂಸಾರವು ಎರಡು ಅಲಗಿನ ಕತ್ತಿ. ಇದನ್ನು ಸರಿಯಾಗಿ ವಿವೇಕದಿಂದ ಬಳಸಿದರೆ ಜೀವನಿಗೆ ಉತ್ಕರ್ಷ. ಇಲ್ಲದಿದ್ದರೆ ಅಧಃಪಾತವೇ ಎಂದು ಎಚ್ಚರಿಸಿಯೂ ಇದ್ದಾರೆ–

ಅರಿ ಮಿತ್ರ ಸತಿ ಪುತ್ರ ಬಂಧು ಬಳಗವದೆಲ್ಲ
ಕರುಮದವತಾರಗಳೊ, ಋಣಲತೆಯ ಚಿಗುರೊ ।
ಕುರಿಯನಾಗಿಸಿ ನಿನ್ನ ಕಾಪಿಡುವ ಸಂಸಾರ
ಪುರಿಮಾರಿಯಾದೀತೊ–ಮಂಕುತಿಮ್ಮ ॥

ಮರುಳ ಮುನಿಯನ ಕಗ್ಗ : ಲೋಕಾನುಭವಗಳಿಂದಲೂ ಶಾಸ್ತ್ರಾವಲೋಕನಗಳಿಂದಲೂ ಒಬ್ಬ ಧೀಮಂತ ವ್ಯಕ್ತಿಯ ಚಿಂತನವು ಗಟ್ಟಿಯಾದ ಮೌಲ್ಯವನ್ನು ಗಳಿಸಿಕೊಂಡಿರುತ್ತದೆ. ಆ ವ್ಯಕ್ತಿಯ ವಯೋಮಾನದಿಂದ ವಿಚಾರವು ಬೆಳೆಯುತ್ತ ಚಿಂತನದಲ್ಲಿ ವಿಶಿಷ್ಟ ಪರಿಣಾಮ ಉಂಟಾಗಬಹುದು. ಪ್ರೌಢಾವಸ್ಥೆಯಲ್ಲಿ ಕಾಣಿಸುವ ಶಂಕೆಗಳಿಗೆ ಉತ್ತರವನ್ನು ಕಂಡುಕೊಂಡು ಅನಿಶ್ಚಯವು ನಿಶ್ಚಯರೂಪವನ್ನು ತಳೆದಿರುತ್ತದೆ. ಜ್ಞಾನವೃದ್ಧನ ಬೋಧೆ ಅರಳಿದ ಹೂ. ಜ್ಞಾನವೃದ್ಧನೂ ವಯೋವೃದ್ಧನೂ ಆದವನ ಬೋಧೆ ಮಾಗಿದ ಹಣ್ಣು. ಹೂ ಕಣ್ಣನ್ನು ತಣಿಸೀತು. ಹಸಿವನ್ನು ನೀಗಿಸಿ ಹೊಟ್ಟೆಗೆ ಶಾಂತಿಯನ್ನು ಕೊಡತಕ್ಕದ್ದು ಹಣ್ಣು. ಹಣ್ಣಿನ ಗುಣವಿರುವುದು ಮರುಳ ಮುನಿಯನ ಕಗ್ಗದಲ್ಲಿ.

ವಿಶಾಲವಾದ ವಿಶ್ವವೇ ಒಂದು ಕನ್ನಡಿ. ಜಗತ್ತಿನ ಎಲ್ಲ ಭೂತರಾಶಿಗಳೂ ಈ ಕನ್ನಡಿಯಲ್ಲಿ ಕಾಣುವ ಭಗವಂತನ ಪ್ರತಿಬಿಂಬಗಳು. ಮನುಷ್ಯನು ಕನ್ನಡಿಯಲ್ಲಿ ತನ್ನ ಪ್ರತಿಬಿಂಬವನ್ನು ನೋಡಿ ಸಂತೋಷಿಸುವಂತೆ ಭಗವಂತನು ತನ್ನ ಈ ಪ್ರತಿಬಿಂಬಗಳನ್ನು ನೋಡಿ ನಲಿಯುತ್ತಿರುವನಂತೆ. ಮರುಳ ಮುನಿಯನು ಕಗ್ಗವನ್ನಾರಂಭಿಸುವುದು ಹೀಗೆ—

ಶ್ರೀಮಜ್ಜಗನ್ಮುಕುರವಿಸ್ತರದೊಳಾರ್ ತನ್ನ
ಮೈಮೆಯ ಪ್ರತಿಬಿಂಬ ಚಿತ್ರಗಳ ನೋಡು- ।

ತ್ತಾವೋದಬಡುತಿಹನೊ ಆತನಡಿದಾವರೆಯು
ನಾವುರಸುವಂ ಬಾರೊ–ಮರುಳಮುನಿಯ ॥

ಶ್ರೀ ಶಂಕರಾಚಾರ್ಯರ ದಕ್ಷಿಣಾಮೂರ್ತಿಸ್ತೋತ್ರದ ಆರಂಭದಲ್ಲಿರುವ—

ವಿಶ್ವಂ ದರ್ಪಣದೃಶ್ಯಮಾನನಗರೀತುಲ್ಯಂ ನಿಜಾಂತರ್ಗತಂ
ಪಶ್ಯನ್ನಾತ್ಮನಿ ಮಾಯಯಾ ಬಹಿರಿವೋದ್ಭೂತಂ ಜಗನ್ನಿದ್ರಯಾ ॥

ಎಂಬ ಶ್ಲೋಕದ ಅಭಿಪ್ರಾಯವೇ ಇದು. ಬಿಂಬ ನಿತ್ಯ. ಪ್ರತಿಬಿಂಬ ಅನಿರ್ವಚನೀಯ; ಮಾಯಾ ಕಲ್ಪಿತ. ಈ ದೃಷ್ಟಾಂತವು ಡಿವಿಜಿಯವರಿಗೆ ಬಹಳ ಪ್ರಿಯವಾಗಿತ್ತೆಂದು ತೋರುತ್ತದೆ. ಈ ತಾತ್ಪರ್ಯವೇ ಇರುವ ಐದು ಪದ್ಯಗಳು ಈ ಕಗ್ಗದಲ್ಲಿವೆ. 'ಆ ವಿಚಿತ್ರಕೆ ನಮಿಸೊ' ಎಂದು ತಿಮ್ಮನು ತನ್ನ ಕಗ್ಗದಲ್ಲಿ ಹೇಳಿದ್ದಾನೆ.

ಶ್ರೀವಿಷ್ಣು ವಿಶ್ವಾದಿಮೂಲ ಮಾಯಾಲೋಲ
ದೇವ ಸರ್ವೇಶ ಪರಬೊಮ್ಮನೆಂದು ಜನಂ ।
ಆವುದನು ಕಾಣದೊಡಮಳ್ತಿಯಿಂ ನಂಬಿಹುದೊ
ಆ ವಿಚಿತ್ರಕೆ ನಮಿಸೋ–ಮಂಕುತಿಮ್ಮ ॥

ಮರುಳನಾದರೋ 'ಆತನಡಿದಾವರೆಯು ನಾವುರಸುವಂ ಬಾರೊ' ಎನ್ನುತ್ತಾನೆ. ನಮಸ್ಕಾರವು ದೂರದಲ್ಲಿದ್ದು ನಡೆಯಬಹುದು. 'ನಮಿಸೊ' ಎಂದು ಇನ್ನೊಬ್ಬನಿಗೆ ಉಪದೇಶವಿದೆ. ಇದರಲ್ಲಿ 'ನಾವುರಸುವಂ ಬಾರೊ' ಎಂದು ಸತ್ಯಾನ್ವೇಷಣೆಗೆ ಮುನಿಯನು ಉದ್ಯುಕ್ತನಾಗುತ್ತಾನೆ. 'ಅರಸುವಂ ಬಾರೊ' ಎಂದು ಸಹಭಾಗಿತೆ ಇದೆ. ಮುನಿಯನ ವಿಚಾರವು ಎಷ್ಟು ಪಕ್ವವಾಗಿದೆಯೆಂಬುದಕ್ಕೆ ಇದೊಂದು ನಿದರ್ಶನ ಸಾಕು. ಭಗವಂತನ ಅನ್ವೇಷಣೆಯೇ ಮರುಳಮುನಿಯನ ಕಗ್ಗದ ಸಾಲು–ಎಂದು ಇದರಿಂದ ಸೂಚಿತವಾಗುತ್ತದೆ.

ಲೋಕದಲ್ಲಿ ಘೋರ ವಿಷಮತೆ ಇದೆ. ರೌದ್ರ ಬೀಭತ್ಸಗಳೂ ಸಾವುನೋವುಗಳೂ ತುಂಬಿಕೊಂಡಿವೆ. ಕೊಲ್ಲು–ಕೊಲ್ಲಿಸಿಕೊ ಎಂಬುದು ನಿತ್ಯದ ಪಾಠವಾಗಿದೆ. ಈಶ್ವರನು ಕರುಣಾಳುವಾಗಿದ್ದರೆ ಇಷ್ಟೊಂದು ಸಾವು ಸಂಕಟಗಳು ಲೋಕದಲ್ಲೇಕಿರಬೇಕು ? ಎಂದು ಕೆಲವರು ಪ್ರಶ್ನಿಸುತ್ತಾರೆ. ಅದಕ್ಕೆ ವೇದಾಂತಿ ಹೇಳುವುದೇನೆಂದರೆ: "ನಿಮ್ಮ ಕರ್ಮಫಲಗಳನ್ನು ನೀವು ಅನುಭವಿಸುತ್ತೀರಿ. ಈಶ್ವರನು ನ್ಯಾಯಾಧಿಪತಿ ಇದ್ದ ಹಾಗೆ. ಹಾಗಲ್ಲದಿದ್ದರೆ, ಸರ್ಕಾರವು ಕರುಣಾಳುವಾದರೆ ಜೈಲುಗಳನ್ನೂ ಪೋಲೀಸ್ ಇಲಾಖೆಯನ್ನೂ ವಜಾ ಮಾಡಲಿ! ಎಂದು. 'ನ ಮೇ ದ್ವೇಷ್ಯೋಽ

ಸ್ತಿನಪ್ರಿಯಃ' ಎಂದು ಗೀತೆಯಲ್ಲಿ ಶ್ರೀಕೃಷ್ಣ ಹೇಳಿದ್ದಾನೆ. 'ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ' ಎನ್ನುತ್ತದೆ ಉಪನಿಷತ್ತು. ಇದನ್ನೇ ಮರುಳ ಮುನಿಯನು ತನ್ನದಾದ ಶೈಲಿಯಲ್ಲಿ ಹೇಳುತ್ತಾನೆ–

ಕಣ್ಣೀರ ಸುರಿ ಕೆರಳು ಕಾದು ಕೊಲ್ ಕೊಲ್ಲಿಸಿಕೊ
ಬಿನ್ನಣಿಸು ಹಂಬಲಿಸು ದುಡಿ ಬೆದರು ಬೀಗು ।
ಚಿಣ್ಣರಾಟವೆನೆ ನೋಡುತ ನಿನ್ನ ಪಾಡುಗಳ
ತಣ್ಣಗಿರುವನು ಶಿವನು–ಮರುಳ ಮುನಿಯ ॥

(ಬಿನ್ನಣಿಸು = ಪಾಂಡಿತ್ಯವನ್ನು ತೋರಿಸು.)

ಅದ್ವೈತಿಯು ಸಾಧನಮಾರ್ಗವೆಂದು ಭಕ್ತಿಗೆ ದೊಡ್ಡಸ್ಥಾನವನ್ನು ಕೊಟ್ಟಿದ್ದಾನೆ. ಉಪನಿಷತ್ತುಗಳು ಪ್ರತೀಕೋಪಾಸನೆಯನ್ನು ವಿಶೇಷವಾಗಿ ಉಪದೇಶಿಸಿವೆ. ಈ ಉಪಾಸನೆಯೇ ಭಕ್ತಿಪೂರ್ವಕವಾದ ಧ್ಯಾನ. ಪ್ರತೀಕ ಎಂದರೆ ಮೂರ್ತಿ. ಮೂರ್ತಿಯೇ ಭಗವಂತನೆಂದು ಧ್ಯಾನ ಮಾಡುವ ಜೀವಾತ್ಮ ಪರಮಾತ್ಮರ ಐಕ್ಯ ಜ್ಞಾನಕ್ಕೆ ಸಾಧನವಾಗುತ್ತದೆಯೆಂದು ವೇದಾಂತಶಾಸ್ತ್ರದಲ್ಲಿ ಪ್ರತಿಪಾದನೆ ಇದೆ. 'ಸೋಹಂ ಭಾವೇನ ಪೂಜಯೇತ್' ಎನ್ನುವುದರ ರಹಸ್ಯವೇ ಇದು. ಇದನ್ನು ಡಿ.ವಿ.ಜಿ. ಈ ಶ್ಲೋಕದಲ್ಲಿ ಸುಂದರವಾಗಿ ಪ್ರತಿಪಾದಿಸಿದ್ದಾರೆ–

ನಾನು ನಾನೆಂದು ನಿನ್ನೊಳುಸಿರ್ವಚೇತನವ
ಭಾನು ಶಶಿಗಳ ಮೀರ್ದ ವಿಶ್ವಚೇತನಕೆ ।
ಧ್ಯಾನಸೂತ್ರದೆ ಗಂಟಗಿಡುವ ಪ್ರತೀಕ ಸಂ-
ಧಾನವೇ ಪೂಜೆಯೆಲೊ–ಮರುಳ ಮುನಿಯ ॥

ಜಗತ್ತಿನಲ್ಲಿ ಸೆಣಸಾಟ–ಗುದ್ದಾಟಗಳು ಯಾವಾಗಲೂ ಇರತಕ್ಕವೇ. ಅದನ್ನು ಪೂರ್ತಿ ಹೋಗಲಾಡಿಸಿ ಶಾಂತಿಯನ್ನು ಸ್ಥಾಪಿಸುವುದು ಆಗತಕ್ಕದ್ದೇ ಅಲ್ಲ. ಆದ್ದರಿಂದ ಪರಮ ವೇದಾಂತಿಯಾದ ಮರುಳನ ಹಿತಬೋಧೆ ಹೀಗೆ–'ಶಾಂತಿ ಜಗಕಿಲ್ಲದ ಅಶಾಂತಿಯದು ನಿನಗೇಕೆ? ಭ್ರಾಂತಿಯಳಿದೊಡೆ ಶಾಂತಿ. ಸ್ವಾಂತಸುಸ್ಥಿತಿ ಶಾಂತಿ' ಎಂದು. ಈ ಮಾತನ್ನು 'ಅಜ್ಞಾನನಾಶವೇ ಮೋಕ್ಷ, ಸ್ವಸ್ವರೂಪಾವಸ್ಥಾನವೇ ಮೋಕ್ಷ, ಪರಮಶಾಂತಿಯೇ ಮೋಕ್ಷ' ಎಂಬ ಅದ್ವೈತಿಗಳ ಮಾತುಗಳೊಡನೆ ಹೋಲಿಸಿ ನೋಡಬಹುದು.

'ಮರುಳ ಮುನಿಯನ ಕಗ್ಗ'ವಷ್ಟೂ ವೇದಾಂತಿಯಾಡುವ ಸುಭಾಷಿತಗಳು. ಅದ್ವೈತಾನುಸಂಧಾನಕ್ಕೆ ಎಲ್ಲವೂ ಪೋಷಕವಾದವುಗಳು. 'ಲೋಕವತ್ತು ಲೀಲಾ

ಕೈವಲ್ಯಂ' ಎಂದು ಬ್ರಹ್ಮಸೂತ್ರದಲ್ಲಿ ಬಾದರಾಯಣಾಚಾರ್ಯರು ಬೋಧಿಸಿದಂತೆ, ಡಿವಿಜಿಯವರು ಸಮಸ್ತ ಜಗದ್ವ್ಯಾಪಾರಗಳನ್ನೂ ಈಶ್ವರನ ಲೀಲೆಯೆಂದು ಹೇಳುತ್ತಾರೆ. 'ಭುವನ ಜೀವನವೆಲ್ಲ ಶಿವನ ಲೀಲಾರಂಗ, ಅವನು ಶಿವನಿವನು ಶಿವ ಶಿವ ನೀನು ನಾನು, ಲೀಲೆಯೋ ಜಗವೆಲ್ಲ ಲೋಕ ನಾಟಕ ಲೀಲೆ, ಜಗವೆಲ್ಲ ಲೀಲೆ ಶಿವಲೀಲೆ ಶಾಶ್ವತಲೀಲೆ, ಲೀಲೆಯೋ ಬರಿಲೀಲೆ ಸರ್ವತೋ ಲೀಲೆಯೆಂದು' ಎಂದು ಮತ್ತೆ ಮತ್ತೆ ಹೇಳಿ, ಮಾನವನು ಎಲ್ಲ ಕಷ್ಟಗಳನ್ನೂ ಕ್ರೀಡಾಮನೋಭಾವದಿಂದ ಎದುರಿಸಬೇಕೆಂದು ಸೂಚಿಸಿದ್ದಾರೆ. ಅದ್ವೈತಸಿದ್ಧಾಂತದ ಸಾರವನ್ನು ಹಿಂಡಿ ಕಾವ್ಯವಾಗಿ ನಿರ್ಮಿಸಿದಂತಿದೆ ಈ ಪದ್ಯ–

ಲೀಲೆಯಿಂ ಪಾರಾಗು ಲೀಲೆಯಿಂ ಮೇಲಾಗು
ಲೀಲೆಯೊಳಗೋಲಾಡು ಲೀಲೆಯಿಂ ನೋಡು ।
ಲೀಲೆಯೊಳ ಚಾಲಕನು ಪಾಲಕನು ನೀನಾಗಿ
ಮೂಲೋಕದಾನಂದಿ–ಮರುಳ ಮುನಿಯ ॥